"ELECTION URGENT"

सत्यमेव जयते

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳಿ ಕಟ್ಟಡ (ಹಿಂಭಾಗ), 1ನೇ ಮಹಡಿ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು-52.

**ರಾಜ್ಯ ಚುನಾವಣಾ ಆಯೋಗದ ತಿದ್ದುಪಡಿ ಆದೇಶ ಸಂಖ್ಯೆ: ರಾಚುಆ.30.ಇಯುಬಿ.2018, ಬೆಂಗಳೂರು, ದಿನಾಂಕ: 09-08-2018**

ರಾಜ್ಯ ಚುನಾವಣಾ ಆಯೋಗವು ಕರ್ನಾಟಕ ಪೌರಸಭೆಗಳ (ಕೌನ್ಸಿಲರುಗಳ ಚುನಾವಣೆ) ನಿಯಮಗಳು 1977ರ ನಿಯಮ 3(1) ರಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ದತ್ತವಾಗಿರುವ ಅಧಿಕಾರದ ಮೇರೆಗೆ ಆದೇಶ ಸಂಖ್ಯೆ: ರಾಚುಆ:30:ಇಯುಬಿ:2018, ದಿನಾಂಕ: 02.08.2018 ರಂದು ರಾಜ್ಯದ 105 (29 ನಗರಸಭೆಗಳು, 53 ಪುರಸಭೆಗಳು ಹಾಗೂ 23 ಪಟ್ಟಣ ಪಂಚಾಯಿತಿಗಳು) ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿ ಚುನಾವಣೆ ನಡೆಸಲು ಆದೇಶಿಸಲಾಗಿತ್ತು. ಸದರಿ ವೇಳಾಪಟ್ಟಿಯಂತೆ ಮತಗಳ ಎಣಿಕೆಯನ್ನು ದಿನಾಂಕ: 01.09.2018 (ಶನಿವಾರ) ರಂದು ನಿಗಧಿಪಡಿಸಲಾಗಿತ್ತು.

ಈ ಮಧ್ಯೇ ಮಾನ್ಯ ಉಚ್ಚನ್ಯಾಯಾಲಯ ಬೆಂಗಳೂರು ಇಲ್ಲಿ ದಾಖಲಾಗಿದ್ದ ಪ್ರಕರಣವು ದಿನಾಂಕ: 09.08.2018 ರಂದು ಇತ್ಯರ್ಥವಾಗಿರುವುದರಿಂದ ಮೈಸೂರು, ಶಿವಮೊಗ್ಗ ಮತ್ತು ತುಮಕೂರು ಮಹಾನಗರ ಪಾಲಿಕೆಗಳಿಗೆ ಚುನಾವಣೆಯನ್ನು ಘೋಷಿಸಿದ್ದು, ಮತದಾನವನ್ನು ದಿನಾಂಕ: 31.08.2018 (ಶುಕ್ರವಾರ) ದಂದು ನಡೆಸಲಾಗುತ್ತಿದೆ. ಚುನಾವಣೆ ಘೋಷಿಸಿರುವ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಮತಗಳ ಎಣಿಕೆಯನ್ನು ಏಕಕಾಲದಲ್ಲಿ ನಡೆಸುವ ಉದ್ದೇಶದಿಂದ, **ಮತಗಳ ಎಣಿಕೆಯನ್ನು ದಿನಾಂಕ: 01.09.2018 (ಶನಿವಾರ)ರ ಬದಲಿಗೆ ದಿನಾಂಕ: 03.09.2018 (ಸೋಮವಾರ) ರಂದು ನಡೆಸಲು ಆದೇಶಿಸಿದೆ.** ಚುನಾವಣೆ ನೀತಿ ಸಂಹಿತೆ ದಿನಾಂಕ: 03.09.2018ರ ವರೆಗೆ ಜಾರಿಯಲ್ಲಿರುತ್ತದೆ. ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಆದೇಶಾನುಸಾರ

ಅರ್ಚನ ಎಂ.ಎಸ್ 9/8/2018

(ಅರ್ಚನ ಎಂ.ಎಸ್)
ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.

**ಇವರಿಗೆ:**

ಜಿಲ್ಲಾಧಿಕಾರಿಗಳು ಚಿತ್ರದುರ್ಗ, ದಾವಣಗೆರೆ, ತುಮಕೂರು, ಶಿವಮೊಗ್ಗ, ಮೈಸೂರು, ಚಾಮರಾಜನಗರ, ದಕ್ಷಿಣ ಕನ್ನಡ, ಉಡುಪಿ, ಹಾಸನ, ಮಂಡ್ಯ, ಕೊಡಗು, ಬೆಳಗಾವಿ, ವಿಜಯಪುರ, ಬಾಗಲಕೋಟೆ, ಗದಗ, ಹಾವೇರಿ, ಉತ್ತರ ಕನ್ನಡ, ಕಲಬುರಗಿ, ಕೊಪ್ಪಳ, ಬಳ್ಳಾರಿ, ರಾಯಚೂರು, ಬೀದರ್ ಮತ್ತು ಯಾದಗಿರಿ ಜಿಲ್ಲೆ.